# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ವಿವಿಧ ಜಿಲ್ಲಾ/ತಾಲ್ಲೂಕು ಪಂಚಾಯತಿಗಳ ಮತ್ತು ಅವುಗಳ ವ್ಯಾಪ್ತಿಯ ಶಿಕ್ಷಣ, ಯೋಜನೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳಲ್ಲಿ ತೆರವಾದ ಹುದ್ದೆಗಳು ಭರ್ತಿಯಾದ್ದರಿಂದ ಮತ್ತು ದಿನಗೂಲಿ ನೌಕರರ ಬಾಕಿ/ಪ್ರಸಕ್ತ ಸಾಲಿನ ವೇತನ ವೆಚ್ಚಕ್ಕಾಗಿ ಹಾಗೂ ಹೊರಗುತ್ತಿಗೆ ಸಿಬ್ಬಂದಿಯವ ಸಂಭಾಗನೆಗಾಗಿ ಹೆಚ್ಚುವರಿ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ

**ಓದಲಾಗಿದೆ:**

1. ಸುತ್ತೋಲೆ ಸಂಖ್ಯೆ: ಆಇ 01 ಜಿಪಅ 2014 ದಿನಾಂಕ:1.2.2014
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳ ಪತ್ರಗಳು

**ಪ್ರಸ್ತಾವನೆ:**

ರಾಜ್ಯದ ವಿವಿಧಜಿಲ್ಲಾ/ತಾಲ್ಲೂಕು ಪಂಚಾಯತಿಗಳ ಮತ್ತು ಅವುಗಳ ವ್ಯಾಪ್ತಿಯ ಕೃಷಿ, ಶಿಕ್ಷಣ, ವಾಣಿಜ್ಯ ಮತ್ತು ಕೈಗಾರಿಕೆ, ಪಂಚಾಯತ್ ರಾಜ್ ಇಂಜನಿಯರಿಂಗ್ ಹಾಗೂ ಸಮಾಜ ಕಲ್ಯಾಣ ಇಲಾಖೆಗಳಲ್ಲಿ ತೆರವಾದ ಹುದ್ದೆಗಳು ಭರ್ತಿಯಾದ್ದರಿಂದ ಹಾಗೂ ದಿನಗೂಲಿ ನೌಕರರ ಪ್ರಸಕ್ತ ಸಾಲಿನ ವೇತನ ವೆಚ್ಚಕ್ಕಾಗಿ ಹಾಗೂ ತೆರವಾದ ಹುದ್ದೆಗಳಿಗೆದುರಾಗಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯವರ ಸಂಭಾವನೆಗಾಗಿ ಪ್ರಧಾನ ಲೆಕ್ಕ ಶೀರ್ಷಿಕೆ 2202, 2210, 2225 ಮತ್ತು 2515ರಡಿ ಒಟ್ಟು ರೂ.220.23ಲಕ್ಷಗಳನ್ನು ಜಿಲ್ಲಾ/ತಾಲ್ಲೂಕು ಪಂಚಾಯತಿ ಕಾರ್ಯಕ್ರಮದಡಿ ಹೆಚ್ಚುವರಿಯಾಗಿ ಒದಗಿಸಿ ಬಿಡುಗಡೆಗೊಳಿಸುವಂತೆ ಪ್ರಸ್ತಾವಿಸಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಜಿಲ್ಲಾ ಪಂಚಾಯತ್ ಕಾರ್ಯಕ್ರಮದಡಿಯ ವೆಚ್ಚಕ್ಕಾಗಿ ರೂ.106.44ಲಕ್ಷ ಮತ್ತು ತಾಲ್ಲೂಕು ಪಂಚಾಯತಿ ಕಾರ್ಯಕ್ರಮದಡಿಯ ವೆಚ್ಚಕ್ಕಾಗಿ ರೂ.113.79ಲಕ್ಷಗಳನ್ನು ಅನುಕ್ರಮವಾಗಿ ಲೆಕ್ಕ ಶೀರ್ಷಿಕೆ 2515-00-196-1-05-300 ಮತ್ತು 2515-00-197-1-10-300 ರಡಿ ಬಿಡುಗಡೆಗೊಳಿಸಲು ನಿರ್ಣಯಿಸಿ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 395 ವೆಚ್ಚ 6/2021(ಇ) ದಿನಾಂಕ: 2ನೇ ಆಗಸ್ಟ್ 2021

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದ ಕಾಲಂ 2ರ ಜಿಲ್ಲಾ/ತಾಲ್ಲೂಕು ಪಂಚಾಯತಿಗಳಿಗೆ ಕಾಲಂ 3 ಕಾರ್ಯಕ್ರಮದಡಿ ಪ್ರಸಕ್ತ ಸಾಲಿನ ವೇತನ/ಸಂಭಾವನೆ ವೆಚ್ಚಕ್ಕಾಗಿ ಅಗತ್ಯವಿರುವ ಅನುದಾನವನ್ನು ಕಾಲಂ 4ರ ಲೆಕ್ಕ ಶೀರ್ಷಿಕೆಯಡಿ ಕಾಲಂ 5ರನ್ವಯ ಕಾಲಂ 6ರಂತೆ ಒಟ್ಟು ರೂ.220.23ಲಕ್ಷ (ರೂಪಾಯಿ ಎರಡು ನೂರ ಇಪ್ಪತ್ತು ಲಕ್ಷದ ಇಪ್ಪತ್ತಮೂರು ಸಾವಿರಗಳು ಮಾತ್ರ) ಗಳನ್ನು ಬಿಡುಗಡೆಗೊಳಿಸಿದೆ. ಈ ರೀತಿ ಬಿಡುಗಡೆಗೊಳಿಸಿದ ಅನುದಾನವನ್ನು ಮೇಲೆ (1) ರಲ್ಲಿ ಓದಲಾದ ಸುತ್ತೋಲೆಯಲ್ಲಿ ನೀಡಿರುವ ನಿರ್ದೇಶನದಂತೆ ಕ್ರಮವಹಿಸಿ ಬಿಲ್ಲುಗಳ ತೀರುವಳಿಗೆ ಕ್ರಮವಹಿಸತಕ್ಕದ್ದು. ಪ್ರಸ್ತುತ ಪ್ರಕರಣಕ್ಕೆ ಆರ್ಥಿಕ ಇಲಾಖೆ ಮರುಹೊಂದಾಣಿಕೆಗೆ ಸಹಮತಿಸಿದೆ ಎಂದು ಭಾವಿಸತಕ್ಕದ್ದು.

(ಸೂಚನೆ: ಬಿಡುಗಡೆಗೊಳಿಸಿರುವ ಅನುದಾನವನ್ನು ನಿಧಿ-2ಕ್ಕೆ ಜಮೆ ಮಾಡಿಕೊಂಡು, ನಂತರ ಸಂಬಂಧಪಟ್ಟ ಜಿಲ್ಲಾ/ತಾಲ್ಲೂಕು ಪಂಚಾಯತಿ ಮುಖ್ಯಲೆಕ್ಕಾಧಿಕಾರಿಗಳು/ಕಾರ್ಯನಿರ್ವಾಹಕ ಅಧಿಕಾರಿಗಳು ಮರು ಹೊಂದಾಣಿಕೆ ಆದೇಶವನ್ನು ಈ ಕೆಳಗಿನ ಅಧಿಕಾರಿಗಳಿಗೆ ಸುತ್ತೋಲೆರನ್ವಯ ಪ್ರಸ್ತಾವನೆ ಆರ್ಥಿಕ ಇಲಾಖೆಗೆ ಸಲ್ಲಿಸಿ ಖಜಾನೆಯಲ್ಲಿ ಅಪ್ ಲೋಡ್ ಮಾಡಿಕೊಳ್ಳುವುದು (2515-00-101-0-26-021, 2515-00-102-0-63-033 ಮತ್ತು 034ರಡಿ ಬಿಡುಗಡೆಗೊಳಿಸಿರುವ ಅನುದಾನಕ್ಕೆ ಮರು ಹೊಂದಾಣಿಕೆಯ ಅಗತ್ಯವಿರುವುದಿಲ್ಲ. ಅದೇ ಕಾರ್ಯಕ್ರಮದ ಲೆಕ್ಕ ಶೀರ್ಷಿಕೆಯಡಿ ವೆಚ್ಚ ಭರಿಸತಕ್ಕದ್ದು)

ಈ ಕಾರ್ಯವನ್ನು ಆದ್ಯತೆಯ ಮೇಲೆ ಕ್ರಮವಹಿಸತಕ್ಕದ್ದು, ಯಾವುದೇ ಹಂತದಲ್ಲಿ ಅಂದರೆ ಜಿಲ್ಲಾ ಪಂಚಾಯತಿ ಅಥವಾ ಅನುಷ್ಠಾನಾಧಿಕಾರಿಗಳ ಹಂತದಲ್ಲಿ ವಿಳಂಬವಾಗಿ ಅನುದಾನ ವ್ಯಪಗತವಾದಲ್ಲಿ ಮತ್ತೊಮ್ಮೆ ಅನುದಾನವನ್ನು ಒದಗಿಸುವುದಿಲ್ಲವೆಂದು ಮತ್ತು ವಿಳಂಬಗೊಳಿಸಿದ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಕ್ರಮವಹಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಶ್ರೀಕೃಷ್ಣ ಎನ್. ಬುಗಟ್ಯಾಗೋಳ)

ವಿಶೇಷಾಧಿಕಾರಿ(ಜಿ.ಪಂ.) ಹಾಗೂ ಪದನಿಮಿತ್ತ

ಸರ್ಕಾರದ ಜಂಟಿ ಕಾರ್ಯದರ್ಶಿ

ಆರ್ಥಿಕ ಇಲಾಖೆ

1. ಮಹಾಲೇಖಪಾಲರು(ಎ&ಇ) ಲೆಕ್ಕ ಪರಿಶೋಧನೆ 1 & 2, ಕರ್ನಾಟಕ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಖಜಾನೆ-2, 7ನೇ ಮಹಡಿ, ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿನಗರ, ಬೆಂಗಳೂರು-2ರವರಿಗೆ
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಗ್ರಾಅಪ/ಸಮಾಜ ಕಲ್ಯಾಣ/ಶಿಕ್ಷಣ/ವಾ&ಕೈ/ಯೋಜನೆ ಇಲಾಖೆ

4. ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು
5. ಜಂಟಿ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
6. ಸಂಬಂಧಿಸಿದತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು
7. ಸಂಬಂಧಿಸಿದ ಜಿಲ್ಲಾ/ಉಪ ಖಜಾನಾಧಿಕಾರಿಗಳು
8. ರಕ್ಷಾ ಕಡತಕ್ಕೆ
9. ಹೆಚ್ಚುವರಿ ಪ್ರತಿ

**ಸರ್ಕಾರದ ಆದೇಶ ಸಂಖ್ಯೆ: ಆಇ 395 ವೆಚ್ಚ 6/2021 (ಇ) ದಿನಾಂಕ:2.8.2021ಕ್ಕೆ ಅನುಬಂಧ**

**(ರೂ.ಲಕ್ಷಗಳಲ್ಲಿ)**

| ಕ್ರ.ಸಂ. | ಜಿಲ್ಲಾ/ತಾಲ್ಲೂಕು ಪಂಚಾಯತ್ | ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ | ಲೆಕ್ಕ ಶೀರ್ಷಿಕೆ **2515-00-196-1-05-300**ರಡಿ ಬಿಡುಗಡೆಗೊಳಿಸಿದ ಅನುದಾನ | ಲೆಕ್ಕ ಶೀರ್ಷಿಕೆ **2515-00-197-1-10-300**ರಡಿ ಬಿಡುಗಡೆಗೊಳಿಸಿದ ಅನುದಾನ | ಒಟ್ಟು |
|---|---|---|---|---|---|
| 1 | 2 | 3 | 4 | 5 | 6 |
| 1 | ಚಿತ್ರದುರ್ಗ | 2202-00-101-0-36-005 | 20.89 | | 20.89 |
| 2 | ಬಳ್ಳಾರಿ | 2515-00-101-0-28-005<br>3451-00-101-0-26-005 | 25.85<br>21.27 | | 47.12 |
| 3 | ಕಲಬುರಗಿ | 3451-00-101-0-26-005 | 14.50 | | 14.50 |
| 4 | ಹಾವೇರಿ | 3451-00-101-0-26-005 | 3.93 | | 3.93 |
| 5 | ಶಿವಮೊಗ್ಗ | 2515-00-101-0-26-021 | 20.00 | | 20.00 |
| 6 | ಯಲಹಂಕ | 2515-00-102-0-61-005 | | 16.80 | 16.80 |
| 7 | ಯಾದಗಿರಿ | 2225-00-103-0-74-005 | 1416731837<br>2.8.21 | 9.86 | 9.86 |
| 8 | ಹೆಚ್.ಡಿ.ಕೋಟೆ | 2225-00-102-0-69-005 | | 12.32 | 12.32 |
| 9 | ಹುನಗುಂದ | 2210-00-104-0-61-005 | | 3.90 | 3.90 |
| 10 | ಸಿರಗುಪ್ಪ | 2515-00-102-0-61-005 | | 2.11 | 2.11 |
| 11 | ನೆಲಮಂಗಲ | 2515-00-102-0-69-324 | 1416731892<br>2.8.21 | 4.64 | 4.64 |
| 12 | ಹುಮ್ನಾಬಾದ್ | 2515-00-102-0-63-033 | | 7.11 | 7.11 |
| 13 | ಕನಕಪುರ | 2515-00-102-0-63-034 | 1416731949<br>2.8.21 | 11.00 | 11.00 |
| 14 | ತುಮಕೂರು<br>ಕೊರಟಗೆರೆ<br>ಕುಣಿಗಲ್<br>ಶಿರಾ<br>ತುರುವೇಕೆರೆ<br>ಮಧುಗಿರಿ | 2515-00-102-0-63-033 | 1416731562<br>2/8/21 | 21.54<br>4.74<br>4.79<br>10.19<br>2.39<br>2.39 | 46.04 |
| | | ಒಟ್ಟು | **106.44** | **113.79** | **220.23** |

ಶ್ರೀಕೃಷ್ಣ ಎನ್. [illegible]
ವಿಶೇಷಾಧಿಕಾರಿ (ಪ.ರಾ) [illegible]
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಆರ್ಥಿಕ ಇಲಾಖೆ.